ಅಜೀಬನಿಸಿತು.

ಈ ನಡುವೆ, ನನ್ನ ಶಂಕೆ ಅರ್ಥವಾಯಿತೆನ್ನುವ ಹಾಗೆ, 'ಅಭೀ... ನನಗೆ ಅರ್ಥವಾಗುತ್ತೆ, ನೀನೇನು ಯೋಚಿಸುತ್ತಿದ್ದೀ ಅಂತ. ಐ ಕೆನ್ ಟೋಟಲೀ ಅಂಡರ್‌ಸ್ಟ್ಯಾಂಡ್. ಒಂದೇ ಊರಿನಲ್ಲಿರುವಾಗ ಹತ್ತಾರು ಪರಿಚಿತ ಚಹರೆಗಳು ಸಿಗುವ ಸಾಧ್ಯತೆ ಇರುತ್ತೆ ಅಂತ ನನಗೆ ಗೊತ್ತು... ಟ್ರಸ್ಟ್ ಮೀ, ನಮ್ಮಿಬ್ಬರ ನಡುವೆ ಏನಿದ್ದರೂ, ಅದು ನಮ್ಮಿಬ್ಬರದು ಮಾತ್ರ. ನಾನು ಚೆಲ್ಲುವ ನೆರಳೂ ನನ್ನನ್ನು ಅನುಸರಿಸದ ಹಾಗೆ ನೋಡಿಕೊಂಡಿದೀನಿ... ಸೋ, ಡೋಂಟ್ ವರಿ...' ಅಂತಂದಳು.

'ನಾನೆಲ್ಲಿ ನಿನ್ನ ಡೌಟ್ ಮಾಡಿದೆ, ಆದ್ರ್ರಾ?'

ಈಗ ನನ್ನನ್ನೇ ಒಂದು ಕ್ಷಣ ದಿಟ್ಟಿಸಿ, ಏನನ್ನೋ ಹೇಳಹೊಂಚಿ – ತಕ್ಷಣ ಮಾತು ನುಂಗಿಕೊಂಡಳು. 'ಇರಲಿ, ಬಿಡು... ಅದು ಮುಖ್ಯ ಅಲ್ಲ...' ಅಂದಳು. 'ಅದಿರಲಿ... ಈಗ ಹೇಳು, ಏನು ಆರ್ಡರು ಮಾಡಲಿ?'

ಅನುಮಾನಿಸುತ್ತಲೇ, 'ಜಸ್ಟ್ ಎ ಕಾಫೀ...' ಅಂತಂದೆ.

'ಮಹೋದಯರೇ... ನಾನಿನ್ನೂ ಊಟ ಮಾಡಿಲ್ಲ ಗೊತ್ತಾ?!'

'ಸರಿ... ಯು ಆರ್ಡರ್. ನಾನು ಸುಮ್ಮನೆ ಕೂತಿರುತೀನಿ...'

'ಸುಮ್ಮನೆ ಕೂರಿಸೋಕಾ ತಮ್ಮನ್ನಿಲ್ಲಿ ಕರೆಸಿಕೊಂಡಿದ್ದು?' ಅಂತಂದು, ಮೆನುಕಾರ್ಡಿನಲ್ಲಿ ಕಣ್ಣಿಕ್ಕಿ – ಏನೇನೋ ಎಣಿಸಿ, ಕಡೆಗೆ ಒಂದಷ್ಟು ರೊಟ್ಟಿ, ಒಗ್ಗರಿಸಿದ ಬೇಳೆ, ಒಂದು ಕಠೋರಿ ಮೊಸರು ಆದೇಶಿಸಿದಳು. ಹಾಗೇ ನನಗೊಂದು ಕಾಫಿ.

'ಸೋ... ಟೆಲ್ ಮೀ, ಅಭೀ...' ಎಂದು ಮಾತಿಗೆ ತೊಡಗಿದವಳು, 'ಅರೇ... ಅಲ್ಲಿ ಯಾಕೆ ಕೂತಿದ್ದೀ? ಈ ಕಡೆ ಬರಬಾರದಾ?' ಎಂದು ಬದಿಯಲ್ಲಿ ಕೂರಹೇಳಿದಳು.

'ನೋ ನೋ... ಅಯಾಮ್ ಜಸ್ಟ್ ಫೈನ್...' ಅಂತಂದೆ.

'ಸರಿ... ಐ ವೋಂಟ್ ಫೋರ್ಸ್... ಹೇಳಿದೆನಲ್ಲ, ನಿನಗೆ ಬಿಡುವೂ ಮೂಡೂ ಇದ್ದರೆ ಮಾತ್ರ ಉಳಿದದ್ದು...' ಎಂದು ಹೇಳಿ, ಬಲು ಮಾರ್ಮಿಕವಾಗಿ ಕಣ್ಣು ಮಿಟುಕಿದಳು. ನಾನು ಅದನ್ನು ಪೂರ್ತಿ ಅವಗಣಿಸಿದೆ. ಹತ್ತಾರು ನಿಮಿಷದಷ್ಟು ಕಾಲ, ದೆಹಲಿಯ ಪ್ರಾಜೆಕ್ಟು ಕುರಿತಾಡಿದೆವು. ಅಷ್ಟರಲ್ಲಿ, ಆರ್ಡರು ಮೇಜು ತಲುಪಿತು. ಅವಳ ಊಟ ಮತ್ತು ನನ್ನ ಕಾಫಿಯ ನಡುವೊಂದಿಷ್ಟು ಲೋಕಾಭಿರಾಮ ಜರುಗಿತು.

## *(iii)*

ಆದ್ರ್ರಾ ಫಿಂಗರ್–ಬೌಲಿನಲ್ಲಿದ್ದ ನಿಂಬೆಯ ಹೋಳೆತ್ತಿಕೊಂಡು, ಬಲಗಡೆಯ ಮುಂಗೈ ಉಜ್ಜಿಕೊಳ್ಳುವಾಗಲೇ – ಮತ್ತೊಮ್ಮೆ ಫೋನು ರಿಂಗಾಯಿತು. ಈ ಹೊತ್ತಿಗೆ ನನ್ನ ಫೋನನ್ನು ಸೈಲೆಂಟಾಗಿಸಿದ್ದರಿಂದ, ಮತ್ತೆ ಯಾರದೆನ್ನುವ ಗೊಂದಲ ಹುಟ್ಟಲಿಲ್ಲ. ಮೇಜಿನಲ್ಲಿದ್ದ ಅವಳ ಫೋನಿನಲ್ಲಿ, ಅನೋಮಾ ಎಂಬ ಹೆಸರು ಮಿಣುಕಿದ್ದು ನೋಡಿ, ಇನ್ನು ಆದಷ್ಟು ಬೇಗ ಎದ್ದು ಹೊರಡುವುದೆಂದು ನಿರ್ಧರಿಸಿದೆ.

'ಯೆಸ್ಸ್ ಅನೋಮಾ... ಹೇಳು... ಎಲ್ಲಿದ್ದೀ?' ಆದ್ರ್ರಾ ಕೇಳಿದಳು. 'ಸರಿ... ಫ್ರಂಟ್‌ಡೆಸ್ಕಿನಲ್ಲಿ ಪೂಪ್‌ಸೈಡ್ ಡೆಕ್ ಎಲ್ಲೀಂತ ಕೇಳು... ಕೇಳಿಕೊಂಡು ಬಾ... ಹ್ಞಾಂ ಹ್ಞಾಂ.. ಬ್ರಿಂಗ್ ಬೋತ್ ಆಫ್ ದೆಮ್ ಅಲಾಂಗ್... ಇಬ್ಬರನ್ನೂ ಕರಕೊಂಡು ಬಾ... ನಾನೊಂದು ಮೀಟಿಂಗ್ ಮುಗಿಸುತಾ ಇದ್ದೀನಿ... ವಿಲ್ ಬಿ ಡನ್ ಎನಿ ಮೊಮೆಂಟ್... ನೀನು ಬರಬಹುದು...' ಅನ್ನುತ್ತ